ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೊಡಗು ಜಿಲ್ಲೆ, ಮಡಿಕೇರಿ-571201
**Office of the Deputy Commissioner, Kodagu District, Madikeri-571201**
ದೂರವಾಣಿ ಸಂ:08272-225500 ಫ್ಯಾಕ್ಸ್ ಸಂ:225900 E-Mail:-deo.kodagu@gmail.com Web: https://kodagu.nic.in

ಸಂ:ಪ್ರ.ವಿ/43/2020-21 ದಿನಾಂಕ:-11.08.2020

## ಅಧಿಕೃತ ಜ್ಞಾಪನ

ವಿಷಯ:-2020-21ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಸಂಭವಿಸಿದ ಅತಿವೃಷ್ಠಿಯಿಂದ ಪ್ರಕೃತಿ ವಿಕೋಪ ಉಂಟಾಗಿ ಮಾನವ ಪ್ರಾಣ ಹಾನಿಯಾದ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2020-21ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಸಂಭವಿಸಿದ ಅತಿವೃಷ್ಠಿಯಿಂದ ಪ್ರಕೃತಿ ವಿಕೋಪ ಉಂಟಾಗಿ ಭೂಕುಸಿತ ಮತ್ತು ಪ್ರವಾಹ ಉಂಟಾಗಿರುತ್ತದೆ. ಸದರಿ ಪ್ರಕೃತಿ ವಿಕೋಪದಲ್ಲಿ ಮಾನವ ಪ್ರಾಣ ಹಾನಿಯಾದ ಬಗ್ಗೆ ಎನ್.ಡಿ.ಆರ್.ಎಫ್/ಎಸ್.ಡಿ.ಆರ್.ಎಫ್ ಅಡಿಯಲ್ಲಿ ನೀಡಲಾಗುವ ರೂ.4.00 ಲಕ್ಷಗಳ ಪರಿಹಾರದ ಜೊತೆಗೆ ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ರೂ.1.00 ಲಕ್ಷ ಲಕ್ಷಗಳನ್ನು ಹೆಚ್ಚುವರಿಯಾಗಿ ಸಂತ್ರಸ್ಥರ ಕುಟುಂಬಕ್ಕೆ ತಕ್ಷಣ ಬಿಡುಗಡೆಮಾಡಬೇಕಾಗಿರುತ್ತದೆ. ಈ ಸಂಬಂಧ ಮಾನವ ಪ್ರಾಣ ಹಾನಿಯಾದ ಬಗ್ಗೆ ಸಂಬಂಧಪಟ್ಟ ವಾರಸ್ಸುದಾರರಿಗೆ ಪರಿಹಾರ ಪಾವತಿಸಲು ಯಾವುದೇ ಲೋಪದೋಷವಾಗದಂತೆ, ಈ ಕೆಳಕಂಡ ಷರತ್ತುಗಳನ್ವಯ ನಿಯಮಾನುಸಾರ ಕ್ರಮ ವಹಿಸಲು ಆದೇಶಿಸಿದೆ.

| ಕ್ರ ಸಂ | ಅಧಿಕಾರಿ ಪದನಾಮ |
|---|---|
| 1 | ತಹಶೀಲ್ದಾರ್, ಮಡಿಕೇರಿ, ಸೋಮವಾರಪೇಟೆ ಮತ್ತು ವಿರಾಜಪೇಟೆ ತಾಲ್ಲೂಕು. |

**ಷರತ್ತುಗಳು:**

1) ಮಾನವ ಪ್ರಾಣ ಹಾನಿಯಾದ ಬಗ್ಗೆ ಪೋಲಿಸ್ ಇಲಾಖೆಯಿಂದ ಪ್ರಥಮ ವರ್ತಮಾನ ವರದಿ ನಡೆಸಿದ ಬಗ್ಗೆ ವರದಿ ಹಾಗೂ ಹಾನಿಯ ಛಾಯಾಚಿತ್ರ ಪಡೆದು ಸಲ್ಲಿಸುವುದು ಹಾಗೂ ಸಂಬಂಧಪಟ್ಟ ವೈದ್ಯಾಧಿಕಾರಿಗಳಿಂದ ಮರಣೋತ್ತರ ಪರೀಕ್ಷೆ ನಡೆಸಿ, ಮರಣೋತ್ತರ ಪರೀಕ್ಷೆ ನಡೆಸಿದಬಗ್ಗೆ ಪಿ.ಎಂ ವರದಿ ಪಡೆದು ಸಲ್ಲಿಸುವುದು.
2) ಮಾನವ ಪ್ರಾಣಹಾನಿಯಾದ ಬಗ್ಗೆ ಸಂಬಂಧಪಟ್ಟ ತಾಲ್ಲೂಕು ತಹಶೀಲ್ದಾರರು ಸಂಬಂಧಪಟ್ಟ ಹೋಬಳಿಗಳ ಕಂದಾಯಪರಿವೀಕ್ಷಕರಿಂದ ನೈಜಾಂಶದ ಬಗ್ಗೆ ಮಹಜರ್, ವರದಿ ಹಾಗೂ ವಾರಸುದಾರರ ಬಗ್ಗೆ ಅಗತ್ಯದಾಖಲಾತಿಗಳನ್ನು ಪಡೆದು ಕಡತ ನಿರ್ವಹಿಸಿ, ತುರ್ತಾಗಿ ಚೆಕ್‌ನ್ನು ಸಂಬಂಧಪಟ್ಟ ವಾರಸ್ಸುದಾರರಿಗೆ ನೀಡಿ ಸ್ವೀಕೃತಿ ಹಾಗೂ ಛಾಯಾಚಿತ್ರದೊಂದಿಗೆ, ಉಪ ವಿಭಾಗಾಧಕಾರಿಯವರ ಮುಖಾಂತರ (ಸಮೂಚಿತ ಮಾರ್ಗದಲ್ಲಿ) ಜಿಲ್ಲಾಧಿಕಾರಿಯವರಿಂದ ಘಟನೋತ್ತರ ಮಂಜೂರಾತಿ ಪಡೆದುಕೊಳ್ಳುವುದು.
3) ಪರಿಹಾರ ಮೊತ್ತವನ್ನು 2020-21ನೇ ಸಾಲಿನ ಪ್ರಕೃತಿ ವಿಕೋಪದಲ್ಲಿ ಮಾನವ ಪ್ರಾಣ ಹಾನಿಯಾದ ಪ್ರಕರಣಗಳಿಗೆ ಮಾತ್ರ, ಅರ್ಹ ವಾರಸುದಾರರಿಗೆ ಪರಿಹಾರ ವಿತರಣೆ ಮಾಡತಕ್ಕದ್ದು.

..2

4) ಬಿಡುಗಡೆ ಮಾಡಿರುವ ಅನುದಾನವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಮಾತ್ರ ಬಳಸುವುದು ಹಾಗೂ ಅನುದಾನ ವೆಚ್ಚ ಮಾಡಿದ್ದಕ್ಕೆ ಸಂಬಂಧಿಸಿದಂತೆ ಹಣ ಬಳಕೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
5) ಹಣ ಬಳಕೆಯಲ್ಲಿ ಯಾವುದೇ ಲೋಪವಾದಲ್ಲಿ, ಸಂಬಂಧಪಟ್ಟ ತಹಶೀಲ್ದಾರರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.
6) ಸಂಬಂಧಪಟ್ಟ ತಾಲ್ಲೂಕು ತಹಶೀಲ್ದಾರರು ಘಟನೆಗಳ ಬಗ್ಗೆ ಕಾಲಕಾಲಕ್ಕೆ ಈ ಕಛೇರಿಗೆ ವರದಿ ನೀಡುವುದು ಹಾಗೂ ನಿಗಧಿತ ಅನುಬಂಧದಲ್ಲಿ ಮಾಹಿತಿ ನೀಡುವುದು.

**ಜಿಲ್ಲಾಧಿಕಾರಿ,**
**ಕೊಡಗು ಜಿಲ್ಲೆ, ಮಡಿಕೇರಿ.**

ಪ್ರತಿಯನ್ನು,
1) ಉಪವಿಭಾಗಾಧಿಕಾರಿ, ಮಡಿಕೇರಿ ಉಪ ವಿಭಾಗ ಇವರಿಗೆ ಕ್ರಮಕ್ಕಾಗಿ.
2) ತಹಶೀಲ್ದಾರ್, ಮಡಿಕೇರಿ, ಸೋಮವಾರಪೇಟೆ ಮತ್ತು ವಿರಾಜಪೇಟೆ ಇವರಿಗೆ ಸೂಕ್ತ ಕ್ರಾಮಕ್ಕಾಗಿ.
3) ಕಡತ ಪ್ರತಿ.